# ಶಬರಿಯ ಪ್ರೀತಿ

ರಾಮನನ್ನು ಅರಿತವರೆಲ್ಲರು ಶಬರಿಯನ್ನು ಬಲ್ಲರು. ಶಬರಿ ಭಕ್ತಿಯ ಒಂದು ವಿಶಿಷ್ಟ ಮಾದರಿ. ಕಾಯುವ ತಾಳ್ಮೆ ಹಾಗೂ ಆ ಸಹನೆಗೆ ಅಡಿಗಲ್ಲಾದ ನಂಬಿಕೆಯ ಮೂರ್ತರೂಪ ಶಬರಿ. ಭಕ್ತಿಯ ಆತ್ಯಂತಿಕ ಸ್ಥಿತಿಯಲ್ಲಿ ಭಗವಂತ ಭಕ್ತನ ಬಳಿಗೆ ಇಳಿದುಬರಬಲ್ಲ, ಭಕ್ತನಂತನ ಮನಸ್ಸಿನಂತೆಯೇ ವರ್ತಿಸಬಲ್ಲ ಎನ್ನುವುದಕ್ಕೂ ಶಬರಿಯ ಭಕ್ತಿ ನಿದರ್ಶನದಂತಿದೆ. ಬಹುತೇಕ 'ಭಕ್ತಿ ಕಥನ'ಗಳಲ್ಲಿ, ಭಕ್ತ ದೀನನಾಗಿದ್ದರೆ, ಭಗವಂತ ಕೊಡುವ ಸ್ಥಾನದಲ್ಲಿ ನಿಂತಿರುತ್ತಾನೆ. ಭಕ್ತಿಯ ನೆಲೆಗಟ್ಟಿನಲ್ಲಿ ಸಮಾನತೆ ಸಾಧ್ಯವಾಗಿರುವ ಉದಾಹರಣೆಗಳು ಇಲ್ಲವೇ ಇಲ್ಲವೆನ್ನುವಷ್ಟು ವಿರಳ. ದೈನ್ಯದ ಇನ್ನೊಂದು ರೂಪವೇ ಭಕ್ತಿ. ಆದರೆ, ಶಬರಿಯ ಕಥೆಯಲ್ಲಿ ಭಕ್ತೆ–ಭಗವಂತನ ನಡುವೆ ಅಂತರವೇ ಇಲ್ಲ. ಅದೊಂದು ಸಮಾನತೆಯ ಕಥೆ. ದೈನ್ಯತೆಯ ಹಂಗನ್ನು ಮೀರಿ, ಭಕ್ತಿ ಪ್ರೀತಿಯಾಗಿ ರೂಪಾಂತರಗೊಳ್ಳುವ ವಿಶಿಷ್ಟ ಕಥೆ.

ಕಥೆಗಳ ಮೂಲಕ ನಮಗೆ ದಕ್ಕಿರುವ ಶಬರಿ, ರಾಮನ ದರ್ಶನಕ್ಕಾಗಿ ಜೀವನವನ್ನು ಮುಡಿಪಾಗಿಟ್ಟಿರುವ ಹಣ್ಣು ಹಣ್ಣು ಮುದುಕಿ. ಆಕೆ ಮುಗ್ಧೆ. ಆದರೆ, ಅಜ್ಞಾನಿಯಲ್ಲ. ಜ್ಞಾನದ ಅನ್ವೇಷಕಳಾಗಿದ್ದ ಶಬರಿ, ಧರ್ಮದ ಅರ್ಥವನ್ನು ಹುಡುಕುತ್ತಾ ಸಾಗಿದಾಗ ಎಡತಾಕಿದವರು ಮಾತಂಗ ಋಷಿ. ಋಷ್ಯಮೂಕ ಪರ್ವತದ ತಪ್ಪಲಲ್ಲಿ ನೆಲೆಸಿದ್ದ ಮಾತಂಗರು, ಶಬರಿಗೆ ಗುರುವಾದರು. ಅವರ ಆಶ್ರಮದಲ್ಲಿ ಧರ್ಮಸೂಕ್ಷ್ಮಗಳನ್ನು ಅರಿಯುತ್ತಾ ಅರಿಯುತ್ತಾ ಶಬರಿ, ತನ್ನ ಗುರುವಷ್ಟೇ ಜ್ಞಾನಿಯಾದಳು. ಸಾಯುವ ಕ್ಷಣದಲ್ಲಿ, ರಾಮನ ಬರುವಿನ ವಿಷಯವನ್ನು ತಿಳಿಸಿದ ಗುರು, ಆ ದಿವ್ಯಕ್ಷಣಕ್ಕಾಗಿ ಕಾಯುವಂತೆ ಶಬರಿಗೆ ತಿಳಿಸಿದರಂತೆ. ಮುಂದಿನದು ಜನಜನಿತ ಕಥೆ. ಕನ್ನಡದ ಸಾಹಿತ್ಯ ವಿದ್ಯಾರ್ಥಿಗಳಿಗಂತೂ ವಿ. ಸೀತಾರಾಮಯ್ಯನವರ ಪದ್ಯದ ಕಾರಣದಿಂದಾಗಿ 'ಶಬರಿ' ಮತ್ತಷ್ಟು ಆಪ್ತಳು. 'ಕಾದಿರುವಳು ಶಬರಿ/ ರಾಮ ಬರುವನೆಂದು/ ತನ್ನ ಪೂಜೆಗೊಳುವನೆಂದು' ಎಂದು ಆರಂಭವಾಗುವ ವಿ.ಸೀ. ಅವರ 'ಶಬರಿ' ಕವಿತೆ – 'ಎಳೆಗಾಳಿ ತೀಡುತಿರಲು/ ಕಿವಿಯೆತ್ತಿ ಆಲಿಸುವಳು/ ಎಲೆಯಲುಗೆ ಗಾಳಿಯಲ್ಲಿ/ ನಡೆ ಸಪ್ಪುಳೆಂದು ಬಗೆದು/ ದೂರಕ್ಕೆ ನೋಳ್ಪೆನೆಂದು/ ಮರವೇರಿ ದಿಟ್ಟಿಸುವಳು/ ಗಿರಿ ಮೇಲಕ್ಕೈದಿ ಕೈಯ/ ಮರೆ ಮಾಡಿ ನೋಡುತಿಹಳು/ ಬಾ ರಾಮ, ರಾಮ ಎಂದು/ ಬರುತಿಹನು ಇಹನು ಎಂದು/ ಹಗಲಿರುಳು ತವಕಿಸಿಹಳು/ ಕಳೆದಿಹವು ವರುಷ ಹಲವು' ಎಂದು ಶಬರಿಯ ಕಾತರವನ್ನು ಚಿತ್ರಿಸುತ್ತದೆ.

ರಾಮನ ದರ್ಶನಕ್ಕಾಗಿ ವನವನವ ಸುತ್ತಿ ಸುಳಿಯುವ ಶಬರಿಯಂತೆ, ಸೀತೆಯನ್ನು ಹುಡುಕುತ್ತ ನಡೆದ ರಾಮನದು ವನವನದ ಸುಳಿದಾಟವೇ. ಹುಡುಕಾಟದ ದಾರಿಯಲ್ಲಿ ರಾಮ, ಶಬರಿಯ ಆಶ್ರಮ ಪ್ರವೇಶಿಸುತ್ತಾನೆ. ಅದು, ಇರುಳಿಗೆ ಕಣ್ಣು ಮೂಡುವ ಸಮಯ; ವೃದ್ಧಾಪ್ಯಕ್ಕೆ ಪ್ರಾಯ ದಕ್ಕುವ ಗಳಿಗೆ. ತನ್ನ ಆರಾಧ್ಯದೈವವನ್ನು ಕಂಡು, ಮುಟ್ಟಿ ಮಾತನಾಡಿ ಶಬರಿ ಪುಲಕ ಅನುಭವಿಸುತ್ತಾಳೆ. ಭಗವಂತನಿಗೆ ಹೂಮಾಲೆಯನ್ನು ತೊಡಿಸಿ, ಆರಿಸಿ ತಂದ ತನಿವಣ್ಣಗಳನ್ನು ಅರ್ಪಿಸುತ್ತಾಳೆ. ಆ ಹಣ್ಣುಗಳಾದರೂ ಎಂಥವು? ಪ್ರತಿ ಹಣ್ಣನ್ನೂ ಶಬರಿ ಕಚ್ಚಿ ರುಚಿ ನೋಡಿದ್ದಾಳೆ. ಹುಳಿಯಾದುದನ್ನು ಬಿಟ್ಟು, ಸಿಹಿಯಾದ ಫಲಗಳನ್ನಷ್ಟೇ ತಂದಿದ್ದಾಳೆ. ಹಣ್ಣುಗಳು ಎಂಜಲಾದುದನ್ನು ಲಕ್ಷ್ಮಣ ಗಮನಿಸುತ್ತಾನೆ. ತಮ್ಮನ ಸೂಚನೆಯನ್ನು ರಾಮ ಲೆಕ್ಕಿಸುವುದೇ ಇಲ್ಲ. ಇಂಥ ಅಮೃತಫಲಗಳನ್ನು ಜೀವನದಲ್ಲೇ ತಿಂದಿಲ್ಲ ಎಂದು ಶಬರಿ ಕೊಟ್ಟ ಹಣ್ಣುಗಳನ್ನು ಸವಿಯುತ್ತಾನೆ. ಭಕ್ತಿಗೆ ಎಂಜಲೆ?

ಶಬರಿ ಮಹಾ ಜ್ಞಾನಿ. ಮಾತಂಗ ಮುನಿಯಿಂದ ಧರ್ಮಸೂಕ್ಷ್ಮಗಳನ್ನು ಅರಿತವಳು. ರುಚಿ ನೋಡುವುದರಿಂದ ಹಣ್ಣು ಎಂಜಲಾಗುತ್ತದೆ ಎನ್ನುವುದನ್ನು ಅರಿಯದಷ್ಟು ಮರುಳುತನ ಆ ತಾಯಿಯದಲ್ಲ. ಎಂಜಲಾದರೂ ಚಿಂತೆಯಿಲ್ಲ, ತನ್ನ ಆರಾಧ್ಯದೈವ ಹುಳಿಯಿಂದ ಮುಖ ಕಿವುಚಬಾರದು ಎನ್ನುವುದು ಆಕೆಯ ಆಸೆ. ರಾಮನಿಗೆ ಶಬರಿ ತಾಯಿಯಂಥವಳು. ಆಕೆಯನ್ನು ನೋಡಿ ರಾಮನಿಗೆ ಕೌಸಲ್ಯೆ ನೆನಪಿಗೆ ಬಂದಿರಬೇಕು. ಅಮ್ಮ ಕೊಡುವ ತುತ್ತಿನಲ್ಲಿ ಎಂಜಲನ್ನು ಹುಡುಕುವುದೆ? ಶಬರಿ ಕೊಟ್ಟ ಹಣ್ಣುಗಳಲ್ಲಿ ರಾಮನಿಗೆ ಕಾಣಿಸಿದ್ದು ತಾಯಿಯ ವಾತ್ಸಲ್ಯ. ಶಬರಿಗೆ ರಾಮನಲ್ಲಿ ಕಾಣಿಸಿದ್ದು ಭಗವಂತನೆಂಬ ಕಂದ. ಮಕ್ಕಳೂ ದೇವರಲ್ಲವೆ? ತಾಯಿಯೂ ದೇವರು. ಭಕ್ತ–ಭಗವಂತನ ನಡುವೆ ಭಕ್ತಿ ದ್ರವ್ಯವಾದಂತೆ, ತಾಯಿ–ಮಗುವಿನ ನಡುವೆ ಪ್ರೀತಿಯೇ ದ್ರವ್ಯ. ಆತ್ಯಂತಿಕ ಸ್ಥಿತಿಯಲ್ಲಿ ಭಕ್ತಿಯೂ ಪ್ರೀತಿಯಾಗಬೇಕಲ್ಲವೆ? ಭಕ್ತಿ ಪ್ರೀತಿಯಾಗದೆ ಹೋದರೆ, ಅದು ಜಡವಾದೀತು. ಭಕ್ತ ದೀನನಾಗಬೇಕೆಂದು ಭಗವಂತ ಬಯಸಿದರೆ ಅದು ಭಗವಂತನ ಹಿರಿಮೆಗೆ ಕುಂದಲ್ಲವೆ? ದೇವರಿಗೆ ನೈವೇದ್ಯವನ್ನು ಸಲ್ಲಿಸಿ, ಪ್ರಸಾದವೆಂದು ಸ್ವೀಕರಿಸುವುದು ರೂಢಿ. ಶಬರಿ ಮತ್ತು ರಾಮ ರೂಢಿ ಮುರಿಯುತ್ತಾರೆ. ಭಕ್ತಿಯನ್ನು ಪ್ರೀತಿಯಾಗಿಸುತ್ತಾರೆ.

ಶಬರಿ ಮತ್ತು ರಾಮ ಎನ್ನುವುದು ವ್ಯಕ್ತಿಗಳಷ್ಟೇ ಅಲ್ಲ, ರೂಪಕಗಳೂ ಹೌದು. ಬಡಜನರು, ಆರ್ತರು 'ಮಾನವೀಯ ರಾಮ'ನಿಗಾಗಿ ಸದಾ ಕಾಲ ಹಂಬಲಿಸುತ್ತಲೇ ಇರುತ್ತಾರೆ. 'ಶಬರಿವೊಲು ಜನವು, ದಿನವೂ/ ಯುಗಯುಗವು ಕರೆಯುತಿಹುದು' ಎನ್ನುವ ಸೀತಾರಾಮಯ್ಯನವರು, 'ಬಾ ರಾಮ, ಬಾರ, ಬಾರಾ/ ಬಡವರನು ಕಾಯು ಬಾರಾ/ ಕಂಗಾಣದಿವರ ಪ್ರೇಮ/ ನುಡಿಸೋತ ಮೂಕ ಪ್ರೇಮ' ಎಂದು ಉದ್ಗರಿಸುತ್ತಾರೆ. 'ನುಡಿಸೋತ ಮೂಕ ಪ್ರೇಮ' – ಎಂಥ ಅದ್ಭುತ ಮಾತು. ಶಬರಿಯದು ಮಾತಿನಲ್ಲಿ ಕಟ್ಟಿಕೊಡಲಾಗದ ಮೂಕ ಪ್ರೇಮವೇ ಹೌದು.

ಭಕ್ತಿಯಾದರೂ ಅಧ್ಯಾತ್ಮವಾದರೂ ಪ್ರೀತಿಯನ್ನು ಒಳಗೊಳ್ಳದೆ ಹೋದರೆ ಅದು ಜಡವಾಗುತ್ತದೆ. ಭಕ್ತಿ–ಅಧ್ಯಾತ್ಮ ಸೃಜನಶೀಲಗೊಳ್ಳುವುದು ಹೇಗೆ ಎನ್ನುವುದಕ್ಕೆ ಶಬರಿ–ರಾಮನ ಸಾಂಗತ್ಯ ಅತ್ಯುತ್ತಮ ಉದಾಹರಣೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಮರ್ತ್ಯದಲ್ಲಿ ನಿಂತು ಗೆಲ್ಲು, ಮರ್ತ್ಯವೇ ಒರೆಗಲ್ಲು.

  —ವಿ.ಕೃ. ಗೋಕಾಕ್

- ನಿನ್ನನ್ನು ಪೀಡಿಸುವ ಸಂಕಟಗಳನ್ನು ನಗುನಗುತ್ತ ನಾಶಪಡಿಸು.

  —ಸ್ವಾಮಿ ವಿವೇಕಾನಂದ

- ಸತ್ಯವನ್ನು ಹೇಳಲೇಬೇಕು. ಯಾರಿಗೆ ನೋವು ಮಾಡಿದರೂ ಸತ್ಯ ಸತ್ಯವೇ.

  ––ಗಾಂಧೀಜಿ

- ವಿದ್ಯೆ ಆಲೋಚಿಸುವುದನ್ನು ಕಲಿಸುತ್ತದೆ.

  —ಹಾ.ಮಾ. ನಾಯಕ

- ಸಾಯುವುದು ಸುಲಭ, ಬಾಳುವುದು ದೊಡ್ಡ ಹೊಣೆಗಾರಿಕೆ.

  —ಎಸ್.ವಿ. ರಂಗಣ್ಣ

- ವ್ಯಕ್ತಿತ್ವ ಸಾಧನೆ ಹೊಸ ಯುಗದ ಬೀಜಮಂತ್ರ.

  —ರಂ.ಶ್ರೀ. ಮುಗಳಿ

- ಬೌದ್ಧಿಕ ಸೌಂದರ್ಯವು ನಿಜಕ್ಕೂ ಎಲ್ಲ ಬಗೆಯ ಸೌಂದರ್ಯಗಳಿಗೂ ಮಿಗಿಲಾದುದು.

  —ಸಿ.ವಿ. ರಾಮನ್

- ಮನುಷ್ಯನನ್ನು ಒಳ್ಳೆಯವನ್ನಾಗಿ ಮಾಡುವುದೇ ನಿಜವಾದ ಧರ್ಮ.

  —ನಾರಾಯಣ ಗುರು

- ನಾನು ನರಕದಲ್ಲಿಯೂ ಸಹ ಒಳ್ಳೆಯ ಪುಸ್ತಕಗಳನ್ನು ಸ್ವಾಗತಿಸುವೆ. ಅವು ಇದ್ದಲ್ಲಿ ಸ್ವರ್ಗ ತಂತಾನೇ ಹುಟ್ಟುತ್ತದೆ.

  —ರವೀಂದ್ರನಾಥ ಟ್ಯಾಗೋರ್

- ಈ ಪ್ರಪಂಚದಲ್ಲಿ ಎರಡು ದುರಂತಗಳಿವೆ. ಒಂದು ಬಯಸಿದ್ದು ನಮಗೆ ಸಿಗದಿರುವುದು. ಮತ್ತೊಂದು ಬಯಸಿದ್ದು ಸಿಕ್ಕಿಬಿಡುವುದು.

  —ಆಸ್ಕರ್ ವೈಲ್ಡ್